**(ಇಂದು ದಿನಾಂಕ 26-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಂದುವರೆದ ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಎಚ್ ಎಚ್ ಸಿ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ . ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| **ಕ್ರ.ಸಂ.** | **ದಾಖಲೆಗಳ ನಮೂನೆ** | **ನಿಶಾನೆ** |
|---|---|---|
| 1 | ಗಾಯದ ಪ್ರಮಾಣ ಪತ್ರದ ದೃಡೀಕೃತ ಪ್ರತಿ | ನಿಪಿ-25 |
| 2 | ಸರ್ಕಾರಿ ವೆನ್ ಲಾಗ್ ಜಿಲ್ಲಾ ಆಸ್ಪತ್ರೆ ಮಂಗಳೂರುರವರು ನೀಡಿದ ಹೊರರೋಗಿಗಳ ಗುರುತಿನ ಚೀಟಿ | ನಿಪಿ-26 |
| 3 | 05 ಮೆಡಿಕಲ್ ಬಿಲ್ಲುಗಳು | ನಿಪಿ-27 |
| 4 | ಅಂಗನ್ಯೂನ್ಯತಾ ಪ್ರಮಾಣ ಪತ್ರ | ನಿಪಿ-28 |
| 5 | ಮಯೂರ ನರ್ಸಿಂಗ್ ಹೋಮ್ ನವರು ನೀಡಿದ ದಿಃ 22.08.2022 ರ ಹೊರ ರೋಗಿಗಳ ಕೇಸ್ ಶೀಟ್ | ನಿಪಿ-29 |
| 6 | ಧಾರವಾಡ ಸ್ಕ್ಯಾನ್ ಸೆಂಟರ್ ರವರು ನೀಡಿದ ಕ್ಷಕಿರಣ ವರದಿ ಹಾಗೂ ಕ್ಷಕಿರಣ | ನಿಪಿ-30 |
| 7 | ಸರ್ಕಾರಿ ವೆನ್ ಲಾಗ್ ಜಿಲ್ಲಾ ಆಸ್ಪತ್ರೆ ಮಂಗಳೂರು ಇವರು ಕಳುಹಿಸಿರುವ ಚೇತನ ಕುಮಾರ ಇವರಿಗೆ ಸೇರಿದ ಸಂಪೂರ್ಣ ಕಡತ | ನಿಪಿ-31 |

**ಪಾಟೀಸವಾಲುಃ 1 ನೇ ಎದುರುದಾರರ ಪರ ಶ್ರೀ ಬಿ ಕೆ ಎಸ್ ವಕೀಲರಿಂದ**

**1 ನೇ ಎದುರುದಾರರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು . ಗೈರು ಹಾಜರು ಇದ್ದಾರೆ , ಕೊರಿಕೆ ಇಲ್ಲ , ಕಾರಣ ಪಾಟೀಸವಾಲು ಇಲ್ಲ ಎಂದು**

**ಪರಿಗಣಿಸಲಾಯಿತು .**

**ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ಎನ್ ಬಿ ವಕೀಲರಿಂದ**

ನಾನು ಈ ದಿನ ಧಾರವಾಡದ ಶಾಸ್ತ್ರಿ ಚಾಳದಿಂದ ಬಂದಿದ್ದೇನೆ . ಅಪಘಾತವಾದ ಸ್ಥಳ ಅದು ಘಾಟ ಸೆಕ್ಷನ್ ನಲ್ಲಿದೆ ಎಂದರೆ ಸರಿ. ಸಾಮಾನ್ಯವಾಗಿ ತಿರುವಿನಲ್ಲಿ ವಾಹನಗಳು ವೇಗವಾಗಿ ಚಲಿಸುವುದಿಲ್ಲ ಎಂದರೆ ಸರಿಯಲ್ಲ . ನಾವು ಸವಾರಿ ಮಾಡುತ್ತಿದ್ದ ಪಲ್ಸರ ಮೋಟರ ಸೈಕಲನ್ನು ನಾನೇ ಚಲಾಯಿಸುತ್ತಿದ್ದೆ . ನನಗೆ ಮೋಟರ ಸೈಕಲ್ ಚಲಾಯಿಸಲು ಪರವಾನಿಗೆ ಇದೆ . ಸದರಿ ಪರವಾನಿಗೆಯನ್ನು ಈ ಅರ್ಜಿಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ . ಸದರಿ ಅಪಘಾತದಲ್ಲಿ ಮತ್ತೊಂದು ಮೋಟರ ಸೈಕಲ ಭಾಗಿಯಾಗಿದೆ ಎಂದರೆ ಸರಿ . ಅಪಘಾತದ ಸಮಯದಲ್ಲಿ ನನ್ನ ಹಾಗೂ ನನ್ನ ವಾಹನದ ಮುಂದೆ ಬರುತ್ತಿದ್ದ ಮೋಟರ ಸೈಕಲ್ ಸವಾರ ಅತೀ ವೇಗವಾಗಿ ಚಲಾಯಿಸುತ್ತಿದ್ದ ಕಾರಣ ಎರಡೂ ಮೋಟರ ಸೈಕಲ್ ಗಳ ನಡುವೆ ನನ್ನ ತಪ್ಪಿನಿಂದಲೇ ಈ ಅಪಘಾತ ಅಗಿದೆ ಎಂದರೆ ಸರಿಯಲ್ಲ . ಅಪಘಾತದ ಸಮಯದಲ್ಲಿ ನಾನು ಸವಾರಿ ಮಾಡುತ್ತಿದ್ದ ಮೋಟರ ಸೈಕಲ್ ಮತ್ತು ನಮ್ಮ ಮುಂದೆ ಹೋಗುತ್ತಿದ್ದ ಮೋಟರ ಸೈಕಲ್ ನಡುವೆ ಅಪಘಾತವಾಯಿತು ಎಂದರೆ ಸರಿಯಲ್ಲ . ನಾನು ಸವಾರಿ ಮಾಡುತ್ತಿದ್ದ ಮೋಟರ ಸೈಕಲ್ ಮತ್ತು ನಮ್ಮ ಮುಂದೆ ಹೋಗುತ್ತಿದ್ದ ಮೋಟರ ಸೈಕಲ್ ನಮ್ಮ ಎದುರಿನಿಂದ ಬರುತ್ತಿದ್ದ ಪಿಕ್ ಅಪ್ ವಾಹನಕ್ಕೆ ಡಿಕ್ಕಿಪಡಿಸಿವೆ ಎಂದರೆ ಸರಿಯಲ್ಲ . ಈ ಅಪಘಾತವನ್ನು ತಪ್ಪಿಸಲು ಪಿಕ್ ಅಪ್ ವಾಹನ ಚಾಲಕ ತುಂಬಾ ಪ್ರಯತ್ನ ಮಾಡಿದ್ದಾನೆ ಎಂದರೆ ಸರಿಯಲ್ಲ . ಆದ್ದರಿಂದ ಅಪಘಾತವು ಪಿಕ್ ಅಪ್ ವಾಹನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ .

ಅಪಘಾತದ ನಂತರ ಮೊದಲು ಶಿರಾಳಕೊಪ್ಪದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ

ಪಡೆದು ನಂತರ  ಮಂಗಳೂರು ಸರ್ಕಾರಿ  ಆಸ್ಪತ್ರೆಗೆ ದಾಖಲಿಸಿದರು .  ನಂತರ ಮಂಗಳೂರು ವೇನ್‌ಲಾಕ್ ಆಸ್ಪತ್ರೆಗೆ  ಅದೇ ದಿನ ಹೋದೆನು . ವೇನ್‌ಲಾಕ್ ಆಸ್ಪತ್ರೆಯಲ್ಲಿ  45 ದಿನ ಒಳರೋಗಿಯಾಗಿದ್ದೆ . ವೇನ್‌ಲಾಕ್ ಆಸ್ಪತ್ರೆಯಲ್ಲಿ ವೈದ್ಯರಿಗೆ  ಗಾಯಗಳು ಹೇಗೆ ಆದವು ಎನ್ನುವುದನ್ನು ನಾನೇ ಮಾಹಿತಿ ಕೊಟ್ಟಿದ್ದೆನೆ . ನಾನು  ವೇನ್‌ಲಾಕ್  ಆಸ್ಪತ್ರೆಯ ವೈದ್ಯರ ಮುಂದೆ  ಮಾಹಿತಿ ಕೊಡುವಾಗ  ಬೈಕ ಮೇಲಿಂದ ಬಿದ್ದಿರುವುದಾಗಿ ಹೇಳಿದ್ದೆನೆ ಎಂದರೆ ಸರಿ . ವೇನ್‌ಲಾಕ್ ಆಸ್ಪತ್ರೆಯಲ್ಲಿ  ನನಗೆ  ಚಿಕಿತ್ಸೆ ಕೊಟ್ಟ ನಂತರ  ಆ ಪ್ರಕಾರ ನಾನು ಗುಣಮುಖವಾದ ನಂತರ  ಬಿಡುಗಡೆ ಮಾಡಿದ್ದಾರೆ ಎಂದರೆ ಸರಿ .  ಮಂಗಳೂರು  ವೇನ್‌ಲಾಕ್ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ  ಧಾರವಾಡದ ಮಯೂರ ಆಸ್ಪತ್ರೆಗೆ ಬಂದೆನು . ಧಾರವಾಡದ  ಮಯೂರ ಆಸ್ಪತ್ರೆಯಲ್ಲಿ 3-4 ಬಾರಿ  ಚಿಕಿತ್ಸೆ ಪಡೆದಿದ್ದೆನೆ .

ನನಗೆ ಆಗಿರುವ  ಗಾಯಗಳಿಂದ  ಸಂಪೂರ್ಣವಾಗಿ  ಗುಣಮುಖವಾಗಿದ್ದೆನೆ ಎಂದರೆ ಸರಿಯಲ್ಲ . ನಾನು ನನ್ನ  ದಿನನಿತ್ಯದ ಕೆಲಸಗಳನ್ನು ಸ್ವತಂತ್ರವಾಗಿ ಮಾಡಿಕೊಳ್ಳುತ್ತಿದ್ದೆನೆ ಎಂದರೆ ಸರಿ .  ಅಪಘಾತದ  ಮೊದಲಿನಂತೆ ಕೆಲಸ ಮಾಡಲು ಆಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವ  ದಾಖಲೆಗಳು ಮತ್ತು ಮೆಡಿಕಲ್ ಬಿಲ್ಲುಗಳು  ಸೃಷ್ಟಿ ಮಾಡಿತಂದು ಹಾಜರುಪಡಿಸಿದ್ದೆನೆ ಎಂದರೆ ಸರಿಯಲ್ಲ . ಮಯೂರ ಆಸ್ಪತ್ರೆಯವರು ನೀಡಿದ  ನಿಪಿ-29  ನಾನು ಪರಿಹಾರ ಪಡೆಯಲು ಯಾವುದೇ ರೀತಿಯಿಂದ  ಸಹಕಾರಿ ಆಗುವುದಿಲ್ಲ ಎಂದರೆ ಸರಿಯಲ್ಲ .  ನಾನು ನನ್ನ ಉದ್ಯೋಗ , ವರಮಾನ  ಹಾಗೂ ವಯಸ್ಸಿನ ಕುರಿತಾದ ದಾಖಲೆಗಳನ್ನು ಹಾಜರುಪಡಿಸದೇ  ಇದ್ದರೂ ಅಪಘಾತದ  ಸಮಯದಲ್ಲಿ ತನ್ನ ವಯಸ್ಸನ್ನು  26  ಎಂದು, ಉದ್ಯೋಗ ,  ವರಮಾನ ಪ್ರತಿ ತಿಂಗಳು  ರೂ. 25,000/- ಇತ್ತು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ವೈದ್ಯಕೀಯ ವೆಚ್ಚಕ್ಕಾಗಿ ರೂ .  5 ಲಕ್ಷ ರೂಪಾಯಿ  ಹಣ ಖರ್ಚು ಮಾಡಿರುವುದಾಗಿ  ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅಪಘಾತದ ಪರಿಣಾಮ ಉಂಟಾದ ಗಾಯಗಳಿಂದ ನನಗೆ ಶಾಶ್ವತ ಅಂಗನ್ಯೂನ್ಯತೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವ ದಾಖಲೆಗಳನ್ನು ನನ್ನ ಅರ್ಜಿಗೆ ಪೂರಕವಾಗಿ ಅನುಕೂಲವಾಗುವಂತೆ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಪಿಕ್ ಅಪ್ ವಾಹನ ಚಾಲಕನು ಅಧಿಕೃತವಾಗಿ ಚಾಲನಾ ಪರವಾನಿಗೆ ಹೊಂದದ ಕಾರಣ ನಾನು ಕೇಳಿರುವಂತೆ ಪರಿಹಾರ ಪಾವತಿಸುವ ಹೊಣೆ 2 ನೇ ಎದುರುದಾರನಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ . ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.